ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 73/2024**

ಪ್ರ.ವ.ಬೋ.ತಾಃ 23-07-2026

ಚಾಸಾಃ 9 ಫ್ರಾಸಾಃ 7

| | |
|---|---|
| ಸಾಕ್ಷಿಯ ಹೆಸರು | ರಮೇಶ |
| ತಂದೆ/ಗಂಡನ ಹೆಸರು | ನಾಗಪ್ಪ |
| ವಯಸ್ಸು | 40 ವರ್ಷ |
| ವೃತ್ತಿ | ಮೇಕೆ ಸಾಕಾಣಿಕೆ |
| ವಾಸ | ಚಿನ್ನೇನಹಳ್ಳಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಆರೋಪಿ ಗೊತ್ತು. ಕಳೆದ 2 ವರ್ಷಗಳ ಹಿಂದೆ ಬೆಳಗ್ಗೆ 6.30 ಗಂಟೆ ಸಮಯದಲ್ಲಿ ಮಿಡಿಗೇಶಿ ಮತ್ತು ಚಿನ್ನೇನಹಳ್ಳಿ ಗ್ರಾಮದ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ಒಂದು ಕಂಟೈನರ್ ವಾಹನ ಸಿದ್ದರಾಜು ಮತ್ತು ಹನುಮಂತರಾಯಪ್ಪನವರಿಗೆ ಡಿಕ್ಕಿಪಡಿಸಿತು. ಇದರಿಂದ ಹನುಮಂತರಾಯಪ್ಪನವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಸಿದ್ದರಾಜುರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಮೃತಪಟ್ಟರು ಎಂಬ ವಿಚಾರ ಗೊತ್ತಾಯಿತು. ಮೃತ ಸಿದ್ದರಾಜುರವರ ತುಮಕೂರು ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಗ್ಗೆ 8.30 ರಿಂದ 10.00 ಗಂಟೆಯವರೆಗೆ ಶವ ಪಂಚನಾಮೆ ಮಾಡಿದರು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಅಪಘಾತವಾದ ಐದು

ದಿನಗಳ ನಂತರ ಪೊಲೀಸರು ನನ್ನ ಹಾಗೂ ಚಾಸಾ.8 ರವರ ಸಮಕ್ಷಮ ಅಪಘಾತಪಡಿಸಿದ ಕಂಟೈನರ್ ವಾಹನವನ್ನು ಅಮಾನತ್ತುಪಡಿಸಿಕೊಂಡರು. ಆ ಕಂಟೈನರ್ ವಾಹನದ ಚಾಲಕ ಮತ್ತು ಮಾಲೀಕರು ಆ ಸ್ಥಳದಲ್ಲಿದ್ದರು. ಆ ಅಮಾನತ್ತು ಪಂಚನಾಮೆಯನ್ನು ಸಂಜೆ 6.00 ರಿಂದ 7.00 ಗಂಟೆವರೆಗೆ ಮಾಡಲಾಂತು. ಆ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.14 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.14(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಎರಡು ಫೋಟೋಗಳನ್ನು ತೆಗೆದರು. ಆ ಫೋಟೋಗಳನ್ನು ನಿಪಿ.15 ಮತ್ತು 16 ಎಂದು ಈಗಾಗಲೇ ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸ.ಸ.ಅ. ರವರಿಂದಃ–**

ಆ ದಿನ ಅಪಘಾತಕ್ಕೊಳಗಾಗಿ ಸ್ಥಳದಲ್ಲಿಯೇ ಮೃತಪಟ್ಟ ವ್ಯಕ್ತಿಯ ಹೆಸರು ಹನುಮಂತರಾಯಪ್ಪ ಎಂಬುವವರಾಗಿರುವುದಿಲ್ಲ ಬದಲಾಗಿ ನಿಂಗಪ್ಪ ಎಂದರೆ ಎಂದರೆ ಸರಿ. ಆ ಅಮಾನತ್ತು ಪಂಚನಾಮೆಯನ್ನು ದಿಃ 27.07.2024 ರಂದು ಮಾಡಲಾಗಿದ್ದು, ಅಪಘಾತಪಡಿಸಿದ ಕಂಟೈನರ್ ವಾಹನ ಸಂಃ ಕೆಎ–52–ಬಿ–4874 ನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. ಆ ಅಮಾನತ್ತು ಪಂಚನಾಮೆಯನ್ನು ಸಂಜೆ 7.30 ರಿಂದ 8.30 ಗಂಟೆಯವರೆಗೆ ಬರೆದರು ಎಂದರೆ ಸರಿ.

**<u>ಪಾಟೀ ಸವಾಲುಃ</u>– ಆರೋಪಿಯ ಪರವಾಗಿ ಶ್ರೀ. ಎನ್.ಆರ್. ವಕೀಲರಿಂದಃ–**

ಆರೋಪಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ, ಆದರೆ ಯಾವ ದಿನಾಂಕ ಎಂಬುದು ನನಗೆ ಗೊತ್ತಿಲ್ಲ. ಮಿಡಿಗೇಶಿ ಪೊಲೀಸರು ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದಿದ್ದರು. ಆ ದಿನ ನನ್ನನ್ನು ಪೊಲೀಸರು ಫೋನ್ ಮೂಲಕ ಠಾಣೆಗೆ ಕರೆಸಿದರು. ಆ ಶವ ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆ ಅಮಾನತ್ತು ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಆ ಅಮಾನತ್ತು ಪಂಚನಾಮೆಗೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿದರು ಎಂಬುದು ನನಗೆ ಗೊತ್ತಿಲ್ಲ. ಆ ಸ್ಥಳದಲ್ಲಿದ್ದ ಹಾಜರಿದ್ದ ಜನರು ಹೆಸರುಗಳು ನನಗೆ ಗೊತ್ತಿಲ್ಲ. ಆ ದಿನ ನಾನು ಠಾಣೆಗೆ ಹೋಗಿಲ್ಲ, ಪೊಲೀಸರು ಯಾವುದೇ ಅಮಾನತ್ತು ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ